ದಿ:20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಪ್ರತಿವಾದಿ ಪರ ಶ್ರೀ. ಟಿ.ಎಂ.ಡಿ ವಕೀಲರಿಂದ ಃ

ಕೆ.ಎಸ್.ಆರ್.ಟಿ.ಸಿ ಕಾರ್ಪೊರೇಷನ್ ಗೆ 1989 ನೇ ಇಸವಿಯಲ್ಲಿ ನೇಮಕವಾಗಿದ್ದೇನೆ. ನಾನು ಸಹಾಯಕ ಲೆಕ್ಕಿಗನಾಗಿ ನೇಮಕಗೊಂಡಿದ್ದೇನೆ.

2000-2002 ನೇ ಸಾಲಿನಲ್ಲಿ ಆದ ಅವ್ಯವಹಾರದ ಸಮಯದಲ್ಲಿ ಇನ್ಸ್ಪೆಕ್ಟರ್ ಆಫ್ ಅಕೌಂಟ್ಸ್ ಆಗಿ ಕೆಲಸ ಮಾಡುತ್ತಿದ್ದೆ. ಈ ಸಮಯದಲ್ಲಿ ನಾನು ಇನ್ ಕ್ವೈರಿ ಮಾಡಿಲ್ಲ.

ಡೆಪ್ಯೂಟಿ ಸಿ.ಎ.ಒ ಒಂದು ವರದಿ ಸಲ್ಲಿಸಿದ್ದು ಆ ವರದಿಯಲ್ಲಿ ನಾನು ಡೆಪ್ಯೂಟಿ ಸಿ.ಎ.ಒ ವರದಿ ತಯಾರಿಸುವಲ್ಲಿ ಸಹಾಯ ಮಾಡಿದ್ದೇನೆ ಎಂದರೆ ಸರಿ. ನನಗೆ ಈ ದಾವೆಯ ಸಂಪೂರ್ಣ ಮಾಹಿತಿ ಇಲ್ಲ. ಆದರೆ ವರದಿ ಬಗ್ಗೆ ಮಾಹಿತಿ ಇದೆ.

2000 ದ ಇಸವಿಯಿಂದ 2002 ರವರೆಗೆ ರೂ.62,50,000/- ಹಣದ ವ್ಯವಹಾರ ಕೆ.ಎಸ್.ಆರ್.ಟಿ.ಸಿ., ಬೆಂಗಳೂರು ಕೇಂದ್ರಿಯ ವಿಭಾಗದಲ್ಲಿ ಆಗಿರುತ್ತದೆ. ಈ ಘಟಕದ ವೇತನದ ಬಟವಾಡೆ ವಿಷಯದಲ್ಲಿ ಹಣದ ದುರುಪಯೋಗ ಆಗಿದೆ. ನಮ್ಮ ಸಂಸ್ಥೆಯಲ್ಲಿ ಬಿಲ್ ಕ್ಲಿಯರ್ ಆಗಬೇಕೆಂದರೆ ಅದಕ್ಕೆ ಬೇಕಾದ ನಿಯಮಾವಳಿಗಳು ನನಗೆ ಗೊತ್ತಿದೆ.

ಒಂದು ಬಿಲ್ ಪಾಸಾಗಬೇಕಿದ್ದರೆ ವಿಭಾಗೀಯ ಸಂಸ್ಥೆಯಿಂದ ಡಿಪೋಗೆ ಡಿಇಒ ಆದೇಶವಾಗಬೇಕು ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳಲ್ಲಿ ಒಂದು ಬಿಲ್ ಕ್ಲಿಯರ್ ಆಗಬೇಕಿದ್ದರೆ ಯಾವ ನಿಯಾಮಾವಳಿಗಳನ್ನು ಪಾಲಿಸಬೇಕೆಂದ ದಾಖಲೆಗಳನ್ನು ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ನಿಮಗೆ

ಯಾವುದೇ ತೊಂದರೆ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಈಗ ನಿವೃತ್ತಿಯಾಗಿದ್ದೇನೆ ಎಂದು ನುಡಿಯುತ್ತಾರೆ.

ಪ್ರಶ್ನೆ ಃ ನಿವೃತ್ತಿಯಾದ ನಂತರ ವಾದಿ ಪರವಾಗಿ ಸಾಕ್ಷಿ ನುಡಿಯಲು ನೀವು ಬರಬಹುದೇ?

ಉತ್ತರ ಃ ನನಗೆ ಅವರು ಸಾಕ್ಷಿ ನುಡಿಯಲು ಪತ್ರ ನೀಡಿರುತ್ತಾರೆ.

ಆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ನ್ಯಾಯಾಲಯದ ಪ್ರಶ್ನೆ ಃ ಆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದೇ?

ಉತ್ತರ ಃ ಹಾಜರು ಪಡಿಸಬಹುದು.

ಡಿಇಒ ಆದೇಶವಾದ ನಂತರ ಅದು ಡಿಪೋವಿನ ಬಿಲ್ ಕ್ಲರ್ಕಿಗೆ ಹೋಗುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಡಿಪೋವಿನ ಬಿಲ್ ಕ್ಲರ್ಕ್ ಅಂತಹ ಬಿಲ್ಲನ್ನು ಡಿಪೋದ ಅಕೌಂಟೆಂಟ್ ಮೇಲ್ವಿಚಾರಕರಿಗೆ ಕಳಿಸುತ್ತಾರೆ ಎಂದರೆ ಸರಿ. ಆಮೇಲೆ ಅವರು ಅದನ್ನು ಆಡಿಟ್ ಮಾಡಿ ವಿಭಾಗೀಯ ಕಚೇರಿಗೆ ಕಳಿಸಿಕೊಡುತ್ತಾರೆ ಎಂದರೆ ಸರಿ. ವಿಭಾಗೀಯ ಕಚೇರಿಗೆ ಕಳಿಸಿದ ಬಿಲ್ ಅನ್ನು ಬಿಲ್ ಆಡಿಟ್ ಗುಮಾಸ್ತರು ಅದನ್ನು ಆಡಿಟ್ ಮಾಡಿ ಸಹಿ ಮಾಡಿ ಅದನ್ನು ಡಿವಿಷನ್ ಆಫೀಸ್ ಸುಪರ್ವೈಸರಿಗೆ ವೆರಿಫಿಕೇಷನ್ ಗೋಸ್ಕರ ಕಳಿಸುತ್ತಾರೆ ಎಂದರೆ ಸರಿ. ಅವರು ಅದನ್ನು ನಗದು ಶಾಖೆಗೆ ಕಳಿಸುತ್ತಾರೆ ಎಂದರೆ ಸರಿಯಲ್ಲ. ಅಕೌಂಟ್ ಸುಪರ್ವೈಸರಿಂದ ಅಕೌಂಟ್ ಸುಪರಿಂಡಿಂಟಿಗೆ ಆಮೇಲೆ ಅದು ವಿಭಾಗೀಯ ಕಂಟ್ರೋಲರಿಗೆ ಮಂಜೂರಾತಿಗಾಗಿ ಹೋಗುತ್ತದೆ. ನಾನು ಹೇಳಿದಂತಹ

ಅಧಿಕಾರಿಗಳು ಒಂದು ಬಿಲ್ಲನ್ನು ಪರಿಶೀಲಿಸಬೇಕಾಗುತ್ತದೆ ಎಂದರೆ ಸರಿ. ಡಿ.ಸಿ.ಯವರಿಂದ ಮಂಜೂರಾತಿಯಾದ ನಂತರ ಅಕೌಂಟ್ಸ್ ಶಾಖೆಗೆ ಹೋಗುತ್ತದೆ. ಅದರ ನಂತರ ನಗದು ಶಾಖೆಗೆ ಹೋಗುತ್ತದೆ. ನಗದು ಶಾಖೆಗೆ ಹೋದ ನಂತರ ಆ ಕಚೇರಿಯ ಗುಮಾಸ್ತರು ಡಿಪೋ ಮ್ಯಾನೇಜರ್ ಖಾತೆಗೆ ಒಂದು ಚೆಕ್ಕನ್ನು ಬರೆಯುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಇಲ್ಲದಿದ್ದರೆ ನಗದು ಕೊಡಬೇಕು ಎಂದು ಆದೇಶ ಮಾಡಿ ನಗದು ನೀಡುತ್ತಾರೆ.

ಡಿಪೋ ಮ್ಯಾನೇಜರ್ ಅಕೌಂಟಿಗೆ ಬಂದ ಚೆಕ್ಕನ್ನು ಡಿಪೋ ಅಕೌಂಟ್ ಸುಪರ್ವೈಸರ್ ರವರು ಹಣವನ್ನು ಪಡೆಯುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಚೆಕ್ಕನ್ನು ಗುಮಾಸ್ತರು ಇಲ್ಲವೇ ಸುಪರ್ವೈಸರ್ ರವರು ಬ್ಯಾಂಕಿಗೆ ಹೋಗಿ ಹಣ ತಂದು ಕೊಡುತ್ತಾರೆ. ಕ್ಯಾಶಿಯರ್ ರವರು ಆ ಬಗ್ಗೆ ಪಿಎಡಿಟಿ ಪುಸ್ತಕದಲ್ಲಿ ನಮೂದು ಮಾಡಿ ರಶೀದಿ ಹಾಕುತ್ತಾರೆ ಎಂದರೆ ಸಂಪೂರ್ಣ ಸರಿಯಲ್ಲ. ಸಾಕ್ಷಿ ಮುಂದುವರೆದು ಬ್ಯಾಂಕಿನಿಂದ ಹಣ ತಂದ ನಂತರ ರಶೀದಿ ಹಾಕುತ್ತಾರೆ ಎಂದು ನುಡಿಯುತ್ತಾರೆ. ಈ ದುಡ್ಡಿಗೆ ಯಾರೆಲ್ಲ ಎಲಿಜಿಬಲ್ ಆಗಿರುತ್ತಾರೊ ಅವರ ಅಕ್ವಿಟೆಂಸ್ ರೋಲ್ ಎಂಬುದನ್ನು ತಯಾರು ಮಾಡುತ್ತಾರೆ ಎಂದರೆ ಸರಿ. ಇದರಲ್ಲಿ ಇದ್ದವರಿಗೆ ಕ್ಯಾಶಿಯರ್ ಹಣ ರಿಲೀಸ್ ಮಾಡುತ್ತಾರೆ ಎಂದರೆ ಸರಿ. ಅದರ ಮೇಲೆ ಹಣ ಪಡೆದವರು ಸಹಿ ಮಾಡಬೇಕು ಎಂದರೆ ಸರಿ.

ಒಂದು ಬಿಲ್ ಗುಮಾಸ್ತನ ಕರ್ತವ್ಯ ಏನೇನಿವೆ ಎಂದು ಹೇಳಲು ನನಗೆ ನೆನಪಿಲ್ಲ. ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ವಾದ ಪತ್ರದಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೆ ಅವ್ಯವಹಾರ ಆಗಿದೆ ಎಂಬ ಬಗ್ಗೆ ನಮೂದು ಮಾಡಿಲ್ಲ. ಈ ಅವ್ಯವಹಾರ ಆದ ಬಗ್ಗೆ ಲಭ್ಯವಿದ್ದ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅವ್ಯವಹಾರ ಆದ ಬಗ್ಗೆ ತಿಳಿದುಬಂದಿರುತ್ತದೆ. ಆಡಿಟ್ ವರದಿಯನ್ನು 2002 ನೇ ಇಸವಿಯಲ್ಲಿ ಪರಿಶೀಲಿಸಿರುತ್ತೇವೆ. 2002 ನೇ ಇಸವಿಯಲ್ಲೇ ಅವ್ಯವಹಾರ ಆಗ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಇದಕ್ಕಿಂತ ಮೊದಲು ಇನ್ನೊಂದು ಕೇಂದ್ರ ತಂಡದವರಿಂದ 2002 ರಲ್ಲಿ ನನಗೆ ಹಣ ದುರ್ಬಳಕೆಯ ಬಗ್ಗೆ ಗೊತ್ತಾಗಿರುತ್ತದೆ. 2002 ರಲ್ಲಿ ನನಗೆ ಹಣ ದುರ್ಬಳಕೆಯ ಬಗ್ಗೆ ಗೊತ್ತಾದ ನಂತರ ನಾನು 2010 ರಲ್ಲಿ ದಿವಾಣಿ ವ್ಯಾಜ್ಯವನ್ನು ಸಲ್ಲಿಸಿದ್ದೇನೆ ಎಂದರೆ ಸರಿ.

ನಾನು ಅವ್ಯವಹಾರವಾದ ಬಗ್ಗೆ ವರದಿ ಬಂದ ಬಗ್ಗೆ ತಿಳಿಸಿದ್ದು ಅದರ ಮೇಲೆ ಯಾವುದೇ ಕಾನೂನು ಕ್ರಮವನ್ನು ಕೈಗೊಂಡ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸ್ ದೂರನ್ನು ಅವ್ಯವಹಾರವಾದ ತಕ್ಷಣ ನೀಡಿದ ಬಗ್ಗೆ ನನಗೆ ಗೊತ್ತಿದೆ. ಆ ಪೊಲೀಸ್ ದೂರು ಪ್ರಸ್ತುತ ಏನಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಕ್ರಿಮಿನಲ್ ಪ್ರಕರಣದಲ್ಲಿ ಸಾಕ್ಷಿಯಾಗಿ ನ್ಯಾಯಾಲಯಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಾಕ್ಷಿ ಹೇಳಲು ಹೋದ ಪ್ರಕರಣದಲ್ಲಿ ಸುಮಾರು 6-7 ವ್ಯಕ್ತಿಗಳನ್ನು ಆರೋಪಿಗಳನ್ನಾಗಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನಾನು ಸಾಕ್ಷಿ ಹೇಳಲು ಹೋದ ಪ್ರಕರಣದ ನಂಬ್ರ ನನಗೆ ನೋಡದೆ ಹೇಳಲಾಗುವುದಿಲ್ಲ. ನಾನು ಸಲ್ಲಿಸಿದ ವಾದ ಪತ್ರದಲ್ಲಿ ಈ ಪ್ರಕರಣದ ಬಗ್ಗೆ ನಮೂದಿಸಿದ್ದೇನೋ ಇಲ್ಲವೋ ಎಂದು ನೋಡದೇ

ಹೇಳಲಾಗುವುದಿಲ್ಲ. ವಾದಿಗೆ ವಾದ ಪತ್ರವನ್ನು ತೋರಿಸಲಾಗಿ ಇದರಲ್ಲಿ ನಮೂದಾಗಿದೆಯೇ ಎಂದು ನೋಡಿ ಹೇಳಲು ತಿಳಿಸಿದಂತೆ ಸಾಕ್ಷಿಯು ಅದನ್ನು ಪರಾಂಬರಿಸಿ ಇಲ್ಲ ಎಂದು ನುಡಿಯುತ್ತಾರೆ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಈ ಅವ್ಯವಹಾರದ ಹಣದ ವ್ಯಯಕ್ತಿಕ ಹೊಣೆಗಾರಿಕೆಯನ್ನು ಯಾರ ಮೇಲೆ ಹೇಗೆ ಹಾಕಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ಕಾರ್ಪೋರೇಷನ್ ನವರು ನೋಡಿಕೊಂಡಿರುತ್ತಾರೆ ಮತ್ತು ಶಿಸ್ತು ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕರು ಹೊಣೆಗಾರಿಕೆಯನ್ನು ಹೇರಿರುತ್ತಾರೆ. ಹಾಗಾಗಿ ನನಗೆ ವೈಯಕ್ತಿಕ ಹೊಣೆಗಾರಿಕೆಯನ್ನು ಹೇಗೆ ಹೊರೆಸಿದ್ದಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

ಅವ್ಯವಹಾರ ಆದ ಬಗ್ಗೆ ಎಷ್ಟು ಜನರ ಮೇಲೆ ಇನ್ ಕ್ವೈರಿ ಮಾಡಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯನ್ನು ಯಾವಾಗ ಡಿಸ್ ಮಿಸ್ ಮಾಡಿದ್ದಾರೆ ಎಂಬ ಬಗ್ಗೆ ನನಗೆ ವರದಿಯನ್ನು ನೋಡದೆ ಹೇಳಲಾಗುವುದಿಲ್ಲ. ಈ ಆದೇಶದ ವಿರುದ್ಧ ಪ್ರತಿವಾದಿಯವರು 3 ನೇ ಹೆಚ್ಚುವರಿ ಕಾರ್ಮಿಕ ನ್ಯಾಯಾಲಯದ ಮುಂದೆ ಮೇಲ್ಮನವಿ ಸಲ್ಲಿಸಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಪ್ರಕರಣದ ರೆಫರೆಂಸ್ ನಂ.41/2011 ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಾವು ಮಾಡಿದ ಡಿಸ್ ಮಿಸಲ್ ಆದೇಶವನ್ನು 3 ನೇ ಹೆಚ್ಚುವರಿ ಕಾರ್ಮಿಕ ನ್ಯಾಯಾಲಯವು ತೆಗೆದು ಹಾಕಿದೆ ಎಂದರೆ ಆ ಬಗ್ಗೆ ನನಗೆ

ಮಾಹಿತಿ ಇಲ್ಲ. ಈ ಆದೇಶದ ನಂತರ ಪ್ರತಿವಾದಿಯವರು ಪ್ರಸ್ತುತ ಕಾರ್ಪೋರೇಷನ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ನಿ.ಪಿ.1 ರ ಪುಟ ಸಂಖ್ಯೆ 23 ರಲ್ಲಿ ವೀರಣ್ಣರವರು ಅವ್ಯವಹಾರವನ್ನು ಒಪ್ಪಿ ರೂ.75,000/- ಹಣವನ್ನು ನಮ್ಮ ಕಾರ್ಪೋರೇಷನ್ ಗೆ ಕಟ್ಟಿದ್ದಾರೆ ಎಂಬ ವಿಚಾರವು ಸರಿ. ಹಣ ಕಟ್ಟಿದ ರಶೀದಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ವರದಿಯಲ್ಲಿ ಹೇಳಿದ ನಿ.ಪಿ.1 ರ ಪುಟ ಸಂಖ್ಯೆ 23 ರಲ್ಲಿ ವೀರಣ್ಣರವರು ಅವ್ಯವಹಾರವನ್ನು ಒಪ್ಪಿ ರೂ.75,000/- ಹಣವನ್ನು ನಮ್ಮ ಕಾರ್ಪೋರೇಷನ್ ಗೆ ಕಟ್ಟಿದ್ದಾರೆ ಎಂಬ ವಿಚಾರವು ಸತ್ಯಕ್ಕೆ ದೂರವಾದದ್ದು ಎಂದರೆ ಸರಿಯಲ್ಲ. ಈ ರಶೀದಿಯನ್ನು ನಾನು ಮತ್ತು ಕಾರ್ಪೋರೇಷನ್ ನವರು ಸೇರಿ ಸೃಷ್ಟಿ ಮಾಡಿದ್ದು ಎಂದರೆ ನಾನು ಮಾಡಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ವರದಿಯಲ್ಲಿ ಹೇಳಿದಂತೆ ವೀರಣ್ಣನವರು ತಪ್ಪೊಪ್ಪಿ ಹಣ ಕಟ್ಟಿದ್ದಾರೆ ಎಂಬ ದಿನಾಂಕದಂದು ಅವರು ರಿಂಗ್ ರೋಡ್ ಆಸ್ಪತ್ರೆ, ಬನಶಂಕರಿಯಲ್ಲಿ ದಾಖಲಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಹಣ ಕಟ್ಟುವ ಅರ್ಜಿಯಲ್ಲಿ ವೀರಣ್ಣನವರ ಸಹಿ ಇದ್ದುದ್ದರಿಂದ ಅವರ ಪರವಾಗಿ ಯಾರೂ ಸಹ ಕಟ್ಟಬಹುದು ಎಂದು ಹೇಳುತ್ತಾರೆ. ಹಣ ಕಟ್ಟಲು ಕೊಡುವ ಅರ್ಜಿ ಮತ್ತು ಮನವಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದೇ ಎಂದರೆ ನಾನು ನೋಡಿ ಹೇಳುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಿ.ಪಿ.25 ರಿಂದ ನಿ.ಪಿ.64 ವರೆಗೆ ನ್ಯಾಯಾಲಯದಲ್ಲಿ ನನ್ನ ಪರವಾಗಿ ನಿಶಾನೆಯಾಗಿ

ಗುರುತಿಸಿದ್ದು ಅದರಲ್ಲಿ ಹಣ ಕಟ್ಟಲು ಕೊಡುವ ಅರ್ಜಿ ಮತ್ತು ಮನವಿ ಇರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಗಳನ್ನು ಪರಾಂಬರಿಸಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅದು ಕಛೇರಿಯಲ್ಲಿ ಲಭ್ಯವಿದೆ ಎಂದು ನುಡಿಯುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಕೆಲಸಗಾರರು ಅವ್ಯವಹಾರ ಆದ ಬಗ್ಗೆ ಮನವಿಯನ್ನು ನೀಡಿದ್ದು ಅದರಲ್ಲಿ ಎಲ್ಲಿಯೂ ಸಹ ವೀರಣ್ಣನವರು ಅವ್ಯವಹಾರ ಮಾಡಿದ್ದಾರೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಅವ್ಯವಹಾರ ಆದ ಸಮಯದ ಹಾಜರಾತಿ ಪುಸ್ತಕವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ದಿನಾಂಕ 17.3.2009 ರಂದು ನೀಡಿದ ನಿ.ಪಿ.10 ವಕೀಲರ ನೋಟೀಸು ವೀರಣ್ಣನವರಿಗೆ ತಲುಪಿದೆಯೇ ಇಲ್ಲವೇ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅವರಿಗೆ ನೋಟೀಸು ತಲುಪದೇ ಇದ್ದುದ್ದರಿಂದ ಅವರು ಯಾವುದೇ ಪ್ರತ್ಯುತ್ತರವನ್ನು ನೀಡಿಲ್ಲ ಎಂದರೆ ಸರಿಯಲ್ಲ.

ನಿಜವಾದ ಅಪರಾಧಿಗಳನ್ನು ಬಿಟ್ಟು ಕೆಳವರ್ಗದ ನೌಕರರನ್ನು ಈ ಪ್ರಕರಣದಲ್ಲಿ ಸಿಕ್ಕಿಸಿ ಅವ್ಯವಹಾರ ಮಾಡಿದ್ದಾರೆ ಎಂದು ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ವೀರಣ್ಣನವರು ಯಾವುದೇ ಅವ್ಯವಹಾರವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ವೀರಣ್ಣನವರು ನಮ್ಮ ನಿಗಮಕ್ಕೆ ಯಾವುದೇ ಹಣವನ್ನು ಕಟ್ಟಲು

ಭಾಧ್ಯರಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನಿ.ಪಿ.25 ರಿಂದ ನಿ.ಪಿ.64 ವರೆಗೆ ನ್ಯಾಯಾಲಯದಲ್ಲಿ ಸಲ್ಲಿಸಿದ ದಾಖಲೆಗಳು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಗದು ಪುಸ್ತಕವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ತಮ್ಮ ನಿಗಮದಿಂದ ಮಾಡಿದಂತಹ ಇನ್ ಕ್ವೈರಿ ರಿಪೋರ್ಟನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನಾವು ಇನ್ ಕ್ವೈರಿ ರಿಪೋರ್ಟನ್ನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.